**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.**

# ಸಿ.ಸಿ. ಸಂಖ್ಯೆಃ 617/2015

**ಸಾಕ್ಷಿಯನ್ನು ದಿಃ 25.06.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಲವ . ಎಮ್ . ಆರ್ | ಸಿ . ಡಬ್ಲ್ಯೂಃ **38** ಪಿ . ಡಬ್ಲ್ಯೂಃ **2** |
| ತಂದೆಯ ಹೆಸರು | ಲೇಟ್ ರಾಮೇಗೌಡ | |
| ವಯಸ್ಸು | **43** ವರ್ಷ | |
| ಕೆಲಸ | ಪೊಲೀಸ್ ಇನ್ಸ್ ಪೆಕ್ಟರ್<br>ವಿ . ವಿ . ಪುರಂ ಸಂಚಾರ ಠಾಣೆ<br>ಮೈಸೂರು | |
| ವಾಸಸ್ಥಳ | ಮೈಸೂರು | |

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ನಾನು ದಿಃ 06.09.2013 ರಿಂದ ದಿಃ 04.12.2015 ರ ವರೆಗೆ ನಾನು ಹುಣಸೂರು ಪಟ್ಟಣ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.01.2014 ರಂದು ಈ ಕೇಸಿನ ಕಡತವನ್ನು ಚಾಸಾ-37 ರವರಿಂದ ಪಡೆದು, ಪರಿಶೀಲಿಸಿ ಪ್ರಸ್ತುತ ಪ್ರಕರಣದಲ್ಲಿ ಕಳ್ಳತನವಾಗಿದ್ದ ಹಸು ಹಾಗೂ ಗೂಳಿಗಳನ್ನು ಪತ್ತೆ ಮಾಡಲು ಚಾಸಾ-21,22 ರವರನ್ನು ಕಳುಹಿಸಿಕೊಟ್ಟಿರುತ್ತೇನೆ. ನಂತರ ಚಾಸಾ-6,7 ರವರನ್ನು ಕೃತ್ಯ ನಡೆದ ಸ್ಥಳ ಮಹಜರ್ ಜರುಗಿಸಲು ಬರಮಾಡಿಕೊಂಡು ಮೊದಲು ಚಿಕ್ಕಹುಣಸೂರಿನ ಕೃತ್ಯ ನಡೆದ ಸ್ಥಳದಲ್ಲಿ, ಎರಡನೇಯದಾಗಿ ಹುಣಸೂರು ಮಾರಮ್ಮ ದೇವಸ್ಥಾನದ ಹತ್ತಿರದ ಮೈಸೂರು ರಸ್ತೆಯ ದಿಬ್ಬದಲ್ಲಿ, ಮೂರನೇಯದಾಗಿ ಲಕ್ಷ್ಮಣ ತೀರ್ಥ ನದಿಯ ಸೇತುವೆ ಮುಂದೆ, ನಾಲ್ಕನೇಯದಾಗಿ ಮಲ್ಲಿನಾಥಪುರ ಗ್ರಾಮದ ಮೈಸೂರು ರಸ್ತೆಯ ದಿಬ್ಬದಲ್ಲಿ ಹಾಗೂ ಐದನೇಯದಾಗಿ ಮೈಸೂರು ರಸ್ತೆಯ ಬಿಳಿಕೆರೆ ಬೈಪಾಸ್ ಸ್ಥಳಗಳಲ್ಲಿ ಬೆಳಿಗ್ಗೆ 6.45 ರಿಂದ ಮಧ್ಯಾಹ್ನ 12.30 ರ ಸಮಯದಲ್ಲಿ ಕೃತ್ಯ ನಡೆದ ಸ್ಥಳಗಳ ಮಹಜರ್ ಜರುಗಿಸಿರುತ್ತೇನೆ.

2. ನಂತರ ಠಾಣೆಗೆ ವಾಪಸ್ಸಾಗಿ ಆರೋಪಿತರು ಕೃತ್ಯದ ವೇಳೆ ಟ್ಯಾಂಕರ್ ವಾಹನ ಹತ್ತಿಸಿದ ಬ್ಯಾರೀಕೇಡ್ ಅನ್ನು ಠಾಣಾ PF NO.6/14 ರಲ್ಲಿ ನಮೂದಸಿರುತ್ತೇನೆ. ಗೂಳಿ ಹಾಗೂ ಹಸುಗಳ ಪತ್ತೆಗಾಗಿ ನೇಮಿಸಿದ ಚಾಸಾ-21,22 ರವರು ಒಂದು ಕಪ್ಪು ಬಣ್ಣದ ಹಸು ಹಾಗೂ ಒಂದು ಗೂಳಿಯನ್ನು ಲಿಖಿತ ವರದಿಯೊಂದಿಗೆ ಹಾಜರುಪಡಿಸಿದ್ದು

ಪಂಚರಾದ ಚಾಸಾ–4, 8 ರವರ ಸಮಕ್ಷಮ ಸಂಜೆ 3.00–4.00 ರ ಸಮಯದಲ್ಲಿ ಅಮಾನತ್ತು ಪಂಚನಾಮೆ ಮುಖೇನ ಮಹಜರ್ ಜರುಗಿಸಿರುತ್ತೇನೆ. ಅಮಾನತ್ತುಪಡಿಸಿಕೊಂಡ ಹಸುಗಳನ್ನು ಠಾಣಾ PF NO.4/14 ರಲ್ಲಿ ನಮೂದಿಸಿರುತ್ತೇನೆ.

3. ನಂತರ ಚಾಸಾ–19 ರವರಿಗೆ ಕಪ್ಪು ಬಣ್ಣದ ಹಸು ಹಾಗೂ ಗೂಳಿಗೆ ಆಗಿರುವ ಗಾಯಗಳ ಬಗ್ಗೆ ಪರಿಶೀಲನೆ ಮಾಡಿ ವರದಿ ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ–4, 10 ರವರ ಸಮಕ್ಷಮ ಸಂಜೆ 5.15–6.00 ರ ಸಮಯದಲ್ಲಿ ಮಹಜರ್ ಜರುಗಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ–4, 6 ರಿಂದ 9 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 04.01.2014 ರಂದು ಸಾಕ್ಷಿದಾರರಾದ ಚಾಸಾ–2, 3 ಹಾಗೂ 5 ರವರ ಹೇಳಿಕೆ ಪಡೆದಿರುತ್ತೇನೆ.

4. ದಿಃ 09.01.2014 ರಂದು ಚಾಸಾ–32 ರವರು ಬಿಳಿಕೆರೆ ಠಾಣೆಯ SHO ಆಗಿದ್ದು, ಮಾಹಿತಿ ನೀಡಿದ್ದೇನೆಂದರೆ ಬಿಳಿಕೆರೆ ಠಾಣೆಯ ಚಾಸಾ–30 ರವರು ಸಂಶಯಾಸ್ಪದ ವ್ಯಕ್ತಿ ಅಕಿಲ್ ಪಾಷ ಎಂಬುವವನ್ನು ಬಿಳಿಕೆರೆ ಹೊರವಲಯ ಅರಳುಮಲ್ಲಿಗೆ ಶಾಲೆಯ ಹತ್ತಿರ ಕೆಎ–19–ಎಮ್–7412 ಕಾರಿನೊಂದಿಗೆ ವಶಕ್ಕೆ ಪಡೆದಿದ್ದು, ಠಾಣೆಗೆ ಕರೆದುಕೊಂಡು ಬಂದು ವಿಚಾರಿಸಲಾಗಿ ಈತ ಹುಣಸೂರು ಪಟ್ಟಣ ಠಾಣೆಯ ಮೊ.ಸಂ.4/2014 ರಲ್ಲಿ ಆರೋಪಿಯಾಗಿರುವುದು ತಿಳಿದುಬಂದಿದ್ದು, ಸದರಿ ಮಾಹಿತಿಯನ್ನು ನನಗೆ ದೂರವಾಣಿ ಮುಖೇನ ತಿಳಿಸಿದ್ದು, ನಾನು ಸದರಿ ಆರೋಪಿ ಹಾಗೂ ಕಾರನ್ನು ತರುವಂತೆ ಚಾಸಾ–27 ರಿಂದ 29 ರವರನ್ನು ಕಳುಹಿಸಿಕೊಟ್ಟಿದ್ದು, ಸದರಿಯವರು ಮೇಲ್ಕಂಡ ಆರೋಪಿ ಆಕಿಲ್ ಪಾಷನನ್ನು ಬಿಳಿಕೆರೆ ಠಾಣೆಯಿಂದ ಕರೆದುಕೊಂಡು ಬಂದು ನನ್ನ ಸಮಕ್ಷಮ ಹಾಜರುಪಡಿಸಿದ್ದು, ಸದರಿ ಆರೋಪಿಯನ್ನು ವಿಚಾರಣೆಗೊಳಪಡಿಸಿದಾಗ ಆತ ಕೃತ್ಯದಲ್ಲಿ ಭಾಗಿಯಾಗಿರುವುದು ಧೃಡಪಟ್ಟ ಮೇರೆಗೆ ಆತನ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ.

5. ನಂತರ ಆರೋಪಿಯ ವಿವರವಾದ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಆರೋಪಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತನ್ನನ್ನು

ಕರೆದುಕೊಂಡು ಹೋದರೆ ಕೃತ್ಯವೆಸಗಿದ ಸ್ಥಳ ಹಾಗೂ ಕಳ್ಳತನ ಮಾಡಿದ್ದ ಹಸುಗಳನ್ನು ತೋರಿಸುವುದಾಗಿ ಸ್ವಇಚ್ಛಾ ಹೇಳಿಕೆ ನೀಡಿದ್ದು, ಕೃತ್ಯವೆಸಗಿದ ಸ್ಥಳದ ಗುರುತು ಪತ್ತೆ ಮಹಜರ್ಗಾಗಿ ಆರೋಪಿಯ ಜೊತೆ ಕೃತ್ಯವೆಸಗಿದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-13,14 ರವರನ್ನು ಬರಮಾಡಿಕೊಂಡು, ಅವರ ಸಮಕ್ಷಮ ರಾತ್ರಿ 11.30 ರಿಂದ 12.15 ವರೆಗೆ ಗುರುತು ಪತ್ತೆ, ಸ್ಥಳ ಮಹಜರ್ ಹಾಗುೂ ಒಂದು ಕಪ್ಪು ಹಸು ಮತ್ತು ಗೂಳಿಯನ್ನು ಗುರುತಿಸಿದ ಬಗ್ಗೆ ಮಹಜರ್ ಕ್ರಮ ಜರುಗಿಸಲಾಯಿತು. ನಂತರ ಆರೋಪಿಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ರಿಮಾಂಡ್ ಜೊತೆ ಮಾನ್ಯ ನ್ಯಾಯಾಲಯದಲ್ಲಿ ಹಾಜರುಪಡಿಸುತ್ತೇನೆ. ಅದೇ ದಿನ ಚಾಸಾ-27 ರಿಂದ 29 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಹಾಗೂ ಚಾಸಾ-13,14 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 17.01.2014 ರಂದು ಚಾಸಾ-24, 34 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

6. ದಿಃ 23.01.2014 ರಂದು ಉಳಿದ ಆರೋಪಿತರು ಹಾಗೂ ಹಸುಗಳ ಪತ್ತೆಗಾಗಿ ನೇಮಿಸಿದ್ದು ಚಾಸಾ-23 ರವರು ಒಂದು ಕಪ್ಪು ಬಣ್ಣದ ಹಸುವನ್ನು ಪತ್ತೆ ಮಾಡಿ ವರದಿ ಜೊತೆ ನನ್ನ ಸಮಕ್ಷಮ ಹಾಜರುಪಡಿಸಿದ್ದು, ಸದರಿ ಕಪ್ಪು ಬಣ್ಣದ ಹಸುವನ್ನು ಸಾಕ್ಷಿದಾರರಾದ ಚಾಸಾ-15,16 ರವರ ಸಮಕ್ಷಮ ಸಂಜೆ **6.30** ರಿಂದ **7.30** ರ ಸಮಯದಲ್ಲಿ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡು**,** ಠಾಣಾ PF NO.23/14 ರಲ್ಲಿ ನಮೂದಸಿರುತ್ತೇನೆ.

7. ದಿಃ 25.01.2014 ರಂದು ಒಂದು ಹಸು ಹಾಗೂ ಗೂಳಿಯನ್ನು ನ್ಯಾಯಾಲಯದ ಆದೇಶದ ಮೇರೆಗೆ ಚಾಸಾ-4 ರವರಿಗೆ ಬಿಡುಗಡೆ ಮಾಡಿರುತ್ತೇನೆ. ದಿಃ 03.02.2014 ರಂದು ಚಾಸಾ-17 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 14.02.2014 ರಂದು ಚಾಸಾ-25,26, 30 ರಿಂದ 33 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 28.01.2014 ರಂದು ಚಾಸಾ-19 ರವರಿಂದ ಹಸು ಹಾಗೂ ಗೂಳಿಗೆ ಆಗಿದ್ದ ಗಾಯಗಳ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಪಡೆದಿರುತ್ತೇನೆ.

8. ದಿಃ 09.06.2014 ರಂದು ಕೃತ್ಯ ನಡೆದ ರಾತ್ರಿ ಆರೋಪಿತರುಗಳು ಬಿಳಿಕೆರೆ ಠಾಣೆ ಹಾಗೂ ಇಲವಾಲ ಠಾಣೆಯ ವ್ಯಾಪ್ತಿಯಲ್ಲಿ ರಾತ್ರಿ ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ವಾಹನವನ್ನು ನಿಲ್ಲಿಸುವಂತೆ ಸೂಚನೆ ನೀಡಿ ಪ್ರಯತ್ನಿಸಿದ್ದು, ಆರೋಪಿತರು ವಾಹನವನ್ನು ಆ ಸೂಚನೆಗಳನ್ನು ಉಲ್ಲಂಘಿಸಿ ಹೋದ ಬಗ್ಗೆ ಎರಡು ಠಾಣೆಯ ಠಾಣಾ ದಿನಚರಿಯಲ್ಲಿ ನಮೂದಿಸಿರುವ ವಿವರಗಳನ್ನು ನೀಡುವಂತೆ ಹಾಗೂ ನೈಟ್ ರೌಂಡ್ಸ್ ಸಲುವಾಗಿ ಮೈಸೂರು ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಚಾಲಕರನ್ನು ನೇಮಿಸಿದ ಬಗ್ಗೆ ಕರ್ತವ್ಯ ಧೃಡೀಕರಣ ಪತ್ರ ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ .

9. ದಿಃ 09.06.2014 ರಂದು ಬಿಳಿಕೆರೆ ಠಾಣೆ ಹಾಗೂ ಇಲವಾಲ ಠಾಣೆಯ ಠಾಣಾ ದಿನಚರಿಯ ಧೃಢೀಕೃತ ಪ್ರತಿಗಳನ್ನು ಪಡೆದಿರುತ್ತೇನೆ. ದಿಃ 18.06.2014 ರಂದು ನೈಟ್ ರೌಂಡ್ಸ್ ಸಲುವಾಗಿ ಚಾಲಕರನ್ನು ನೇಮಿಸಿದ ಬಗ್ಗೆ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಸಬ್‌ಇನ್ಸ್‌ಪೆಕ್ಟರ್ ಅವರಿಂದ ಕರ್ತವ್ಯ ಧಡೀಕರಣ ಪತ್ರ ಪಡೆದಿರುತ್ತೇನೆ ದಿಃ 05.08.2014 ರಂದು ನ್ಯಾಯಾಲಯದ ಆದೇಶದ ಮೇರೆಗೆ ಕೃತ್ಯದಲ್ಲಿ ವಶಪಡಿಸಿಕೊಂಡಿದ್ದ ಕೆಎಲ್–11 ಸಿ–8703 ಕ್ಯಾಂಟರ್ ವಾಹನವನ್ನು ಚಾಸಾ–18 ರವರಿಗೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾಸಾ–18 ರವರ ಹೇಳಿಕೆ ಪಡೆದಿರುತ್ತೇನೆ.

10. ದಿಃ 11.08.2014 ರಂದು ಕೃತ್ಯಕ್ಕೆ ಸಂಬಂಧಪಟ್ಟಂತೆ ಐ.ಎಮ್.ವಿ ವರದಿಯನ್ನು ಚಾಸಾ–20 ರವರಿಂದ ಪಡೆದಿರುತ್ತೇನೆ. ದಿಃ 23.01.2015 ರಂದು ಪ್ರಕರಣದ ಇತರೆ ಆರೋಪಿಗಳ ಪತ್ತೆಗೆ ನೇಮೀಸಿದ್ದ ಚಾಸಾ–2, 29 ರವರುಗಳು ಜಾಫರ್ ಅಲಿಯಾಸ್ ಏರ್‌ಪೋರ್ಟ್ ಎಂಬ ಆರೋಪಿತನನ್ನು ಬೆಳಿಗ್ಗೆ 7.30 ರಲ್ಲಿ ಮೈಸೂರಿನ ಶಾಂತಿನಗರ ಬಸ್ ನಿಲ್ದಾಣ ಬಳಿ ವಶಕ್ಕೆ ಪಡೆದು ಬೆಳಿಗ್ಗೆ 9.00 ರ ಸಮಯ ನನ್ನ ಸಮಕ್ಷಮ ಹಾಜರುಪಡಿಸಿದ್ದು, ಆರೋಪಿತನನ್ನು ವಿಚಾರಣೆಗೊಳಪಡಿಸಿ, ಆರೋಪಿತನು ಕೃತ್ಯದಲ್ಲಿ ಭಾಗಿಯಾಗಿರುವುದು ಧೃಡಪಟ್ಟ ಮೇರೆಗೆ ಆತನ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಲಾಯಿತು.

11. ನಂತರ ಆರೋಪಿತನ ವಿವರವಾದ ಸ್ವಇಚ್ಚಾ ಹೇಳಿಕೆ ಪಡೆದಿರುತ್ತೇನೆ. ಆರೋಪಿತನು ತನ್ನ ಸ್ವಇಚ್ಚಾ ಹೇಳಿಕೆಯಲ್ಲಿ ಇನ್ನೊಬ್ಬ ಆರೋಪಿಯಾದ ಮೊಹಮ್ಮದ್ ಇಫ್ತಿಕರ್ ಅಲಿಯಾಸ್ ಗಿಡ್ಡು ಎಂಬುವವನ್ನು ತೋರಿಸುವುದಾಗಿ ಹೇಳಿದ ಮೇರೆಗೆ ಸದರಿ 2 ನೇ ಆರೋಪಿಯನ್ನು ಜೊತೆಯಲ್ಲಿ ಕರೆದುಕೊಂಡು ಮೈಸೂರಿಗೆ ಹೋಗಿ, ಸಂಜೆ 6.30 ರ ಸಮಯದಲ್ಲಿ ಮೈಸೂರು ನಗರದ ಗೌಸಿಯಾ ನಗರದ ಹತ್ತಿರ 2 ನೇ ಆರೋಪಿಯು 3 ನೇ ಆರೋಪಿಯಾದ ಮೊಹಮ್ಮದ್ ಇಫ್ತಿಕರ್ ಅಲಿಯಾಸ್ ಗಿಡ್ಡು ನನ್ನು ತೋರಿಸಿದ್ದು ಆತನನ್ನು ವಶಕ್ಕೆ ಪಡೆದು ರಾತ್ರಿ 7.45 ರ ಸಮಯ ಠಾಣೆಗೆ ವಾಪಸ್ಸು ಬಂದು 3 ನೇ ಆರೋಪಿಯಾದ ಮೊಹಮ್ಮದ್ ಇಫ್ತಿಕರ್ ನ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಆತನ ವಿವರವಾದ ಸ್ವಇಚ್ಚಾ ಹೇಳಿಕೆಯನ್ನು ಪಡೆದಿರುತ್ತೇನೆ.

12. ಅದೇ ದಿನ ಮೇಲ್ಕಂಡ 2, 3 ನೇ ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಸೂಕ್ತ ರಿಮಾಂಡ್ಯಾದಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-1, 24 ರಿಂದ 26, 31,34 ರವರ ಮುಂದುವರಿದ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 25.02.2015 ರಂದು ಸಾಕ್ಷಿದಾರರಾದ ಚಾಸಾ-5 ರಿಂದ 10 ಹಾಗೂ 33 ರವರ ಮುಂದುವರಿದ ಹೇಳಿಕೆಗಳನ್ನು ಪಡೆದಿರುತ್ತೇನೆ.

13. ದಿಃ10.04.2015 ರಂದು ಪ್ರಸ್ತುತ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದ್ದರಿಂದ 1,2 ಹಾಗೂ 3 ನೇ ಆರೋಪಿತರ ದೋಷಾರೋಪಣಾ ಪತ್ರವನ್ನು ಹಾಗೂ 4,8 ನೇ ಆರೋಪಿ ವಿರುದ್ಧ ಅಬ್ಸ್ಕಾಂಡಿಂಗ್ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ.

14. ಸಾಕ್ಷಿಯು ಕೃತ್ಯ ನಡೆದ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಅದೇ ದಿನ ಮತ್ತೊಂದು ಪಂಚನಾಮೆಯನ್ನು ಜರುಗಿಸಿದ್ದು ಅದನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಅದೇ ದಿನ ಒಂದು ಕಪ್ಪು ಬಣ್ಣದ ಹಸುವನ್ನು ಹಾಗೂ ಗೂಳಿಯನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ಜರುಗಿಸಿದ ಅಮಾನತ್ತು ಪಂಚನಾಮೆಯನ್ನು ನಿಪಿ.5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5(ಎ)

ಎಂದು ಗುರುತಿಸಲಾಯಿತು. ಚಾಸಾ-5 ರವರ ಹೇಳಿಕೆಯನ್ನು ನಿಪಿ.6 ಎಂದು, ಚಾಸಾ-7 ರವರ ಹೇಳಿಕೆಯನ್ನು ನಿಪಿ.7 ಎಂದು, ಚಾಸಾ-9 ರವರ ಮುಂದುವರಿದ ಹೇಳಿಕೆಯನ್ನು ನಿಪಿ.8 ಎಂದು ಗುರುತಿಸಲಾಯಿತು.

15. ದಿಃ09.01.2014 ರಂದು1 ನೇ ಆರೋಪಿ ತೋರಿಸಿಕೊಟ್ಟ ಸ್ಥಳ ಪಂಚನಾಮೆಯನ್ನು ನಿಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ದಿಃ 23.01.2014 ರಂದು ಒಂದು ಕಪ್ಪು ಬಣ್ಣದ ಹಸುವನ್ನು ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ತಯಾರಿಸಿದ ಪಂಚನಾಮೆಯನ್ನು ನಿಪಿ.10 ಎಂದು ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ಚಾಸಾ-19 ರವರಿಂದ ಪಡೆದ ಎರಡು ಹಸುಗಳ ಗಾಯ ಪ್ರಮಾಣ ಪತ್ರಗಳನ್ನು ನಿಪಿ.11 ಹಾಗೂ 12 ಎಂದು ಸಾಕ್ಷಿಯ ಸಹಿಯನ್ನು ನಿಪಿ.11(ಎ) ಹಾಗೂ 12(ಎ)ಎಂದು ಗುರುತಿಸಲಾಯಿತು. ದಿಃ 18.06.2014 ರಂದು ಜಿಲ್ಲಾ ಸಶಸ್ತ್ರ ಮೀಸಲು ಪಡೆಯಿಂದ ನೀಡಿರುವ ಚಾಸಾ-26 ರವರ ಕರ್ತವ್ಯ ಧಡೀಕರಣ ಪತ್ರವನ್ನು ನಿಪಿ.13 ಎಂದು,

16. ದಿಃ 02.01.2014 ರಂದು ಇಲವಾಲ ಪೊಲೀಸ್ ಠಾಣೆಯ ಸಿಬ್ಬಂದಿಯವರು ಕೃತ್ಯದಲ್ಲಿ ಭಾಗವಹಿಸಿದ ಆರೋಪಿತರನ್ನು ಹಿಡಿಯಲು ಪ್ರಯತ್ನಿಸಿದ ಬಗ್ಗೆ ಸದರಿ ಠಾಣಾ ದಿನಚರಿಯ ಪುಸ್ತಕದ ಧೃಡೀಕೃತ ಪ್ರತಿಯನ್ನು ನಿಪಿ.14 ಎಂದು ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ಅದೇ ದಿನ ದಿಃ 02.01.2014 ರಂದು ಬಿಳಿಕೆರೆ ಪೊಲೀಸ್ ಠಾಣೆಯ ಸಿಬ್ಬಂದಿಯವರು ಕೃತ್ಯದಲ್ಲಿ ಭಾಗವಹಿಸಿದ ಆರೋಪಿತರನ್ನು ಹಿಡಿಯಲು ಪ್ರಯತ್ನಿಸಿದ ಬಗ್ಗೆ ಸದರಿ ಠಾಣಾ ದಿನಚರಿಯ ಪುಸ್ತಕದ ಧೃಡೀಕೃತ ಪ್ರತಿಯನ್ನು ನಿಪಿ.15 ಎಂದು ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು. ದಿಃ 09.01.2014 ರಂದು 1 ನೇ ಆರೋಪಿಯನ್ನು ಬಿಳಿಕೆರೆ ಪೊಲೀಸ್ ಠಾಣೆಯ ಸಿಬ್ಬಂದಿಯವರಾದ ಚಾಸಾ-30 ರವರು ವಶಕ್ಕೆ ಪಡೆದು ನಂತರ ಚಾಸಾ-32 ರವರ ಸಮಕ್ಷಮ ಹಾಜರುಪಡಿಸಿದ ಬಗ್ಗೆ ನಮೂದಿಸಿರುವ ಠಾಣಾ ದಿನಚರಿಯ ಪುಸ್ತಕದ ಧೃಡೀಕೃತ ಪ್ರತಿಯನ್ನು ನಿಪಿ.16 ಎಂದು ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು. ದಿಃ 11.08.2014 ರಂದು ಚಾಸಾ-

20 ರವರಿಂದ ಪಡೆದ ಐಎಮ್ ವಿ ವರದಿಯನ್ನು ನಿಪಿ.17 ಎಂದು ಸಾಕ್ಷಿಯ ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು.

17. ದಿಃ 03.01.2014 ರಂದು ಚಾಸಾ–21, 22 ರವರು ನೀಡಿದ ವರದಿಯನ್ನು ನಿಪಿ.18 ಎಂದು ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು, ದಿಃ 23.01.2014 ರಂದು ಚಾಸಾ–23 ರವರು ನೀಡಿದ ವರದಿಯನ್ನು ನಿಪಿ.19 ಎಂದು ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು, ಚಾಸಾ–18 ರವರಿಗೆ ವಾಹನವನ್ನು ತಂದು ಹಾಜರುಪಡಿಸುವಂತೆ ನೀಡಿರುವ ನೋಟೀಸ್ ಅನ್ನು ನಿಪಿ.20 ಎಂದು ಸಾಕ್ಷಿಯ ಸಹಿಯನ್ನು ನಿಪಿ.20(ಎ) ಎಂದು, ಚಾಸಾ–18 ರವರು ಒಂದು ವಾಹನಕ್ಕೆ ಸಂಬಂಧಪಟ್ಟಂತೆ ನೀಡಿರುವ ಡಿಲಿವರಿ ನೋಟನ್ನು ನಿಪಿ.21 ಎಂದು ಸಾಕ್ಷಿಯ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.